ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

ನೇ ವರ್ಷ 19ನೇ ಸಂಚಿಕೆ ಕೊಪ್ಪ 31-12-1989 ಭಾನುವಾರ ಬೆಲೆ 60 ಪೈಸೆ

ಕಾರು, ಜೀಪು ಸಹಿತ ಗಂಧ ವಶ, 7 ಜನ ಸೆರೆ

ಬಾಳೆಹೊನ್ನೂರು : ಕೊಟ್ಟಿಗೆಹಾರದ ಬಳಿಯ ಬಾಳೂರು ಕೈಮರದ ಸಮೀಪ ಡಿ 22 ರಂದು ವಲಯ ಅರಣ್ಯಾಧಿಕಾರಿ ಧರ್ಮಪಾಲ್ ಮತ್ತು ಸಿಬ್ಬಂದಿ ಸಿಎಜೆ 2422 ನಂಬರಿನ ಕಾರನ್ನು ಅದರಲ್ಲಿದ್ದ 40 ಸಾವಿರ ರೂ. ಬೆಲೆಯ 360 ಕಿಲೋ ಗಂಧದ ಸಹಿತ ವಶಪಡಿಸಿಕೊಂಡಿದ್ದಾರೆ. ಕಾರಿನಲ್ಲಿದ್ದ ವ್ಯಕ್ತಿ ಪರಾರಿಯಾಗಿದ್ದಾನೆ. ಫಾರೆಸ್ಟರ್ ಗೋಪಾಲ್, ಗಾರ್ಡ್‌ಗಳಾದ ಚಂದ್ರಶೇಖರ್, ಐತಪ್ಪ ಹಾಗೂ ಚಾಲಕ ಶಾಂತಪ್ಪ ಈ ತಂಡದಲ್ಲಿದ್ದ ಸಿಬ್ಬಂದಿಗಳು. ರಾತ್ರಿ ಗಸ್ತಿನಿಂದ ಹಿಂದಿರುವಾಗ ಪತ್ತೆಯಾದ ಈ ಕಾರನ್ನು ಎರಡೂವರೆ ಕಿ.ಮೀ. ಬೆನ್ನಟ್ಟಿ ಹಿಡಿಯಲಾಯಿತು.

ಇದೇ ರೀತಿ ಡಿ. 23 ರಂದು ರಾತ್ರಿ ಗಸ್ತಿನಿಂದ ಮರಳುತ್ತಿದ್ದ ರೇಂಜರ್ ಮತ್ತು ಫಾರೆಸ್ಟರ್‌ಗಳಾದ ತಿಮ್ಮಯ್ಯ, ಗೋಪಾಲ್, ಮಂಜುನಾಥ್, ಗೋವಿಂದರಾಜ್, ಗಾರ್ಡ್‌ಗಳಾದ ಲಾರೆನ್ಸ್ ಡಿ'ಸೋಜ, ರಂಗನಾಥ್, ದೇವನಾಯ್ಕ್ ಹಾಗೂ ಚಾಲಕ ವಾಸುದೇವ ಇವರುಗಳ ತಂಡ ಎಂವೈಎಕ್ಸ್ 9046 ನಂಬರಿನ ಜೀಪನ್ನು ತಡೆದು, 15 ಸಾವಿರ ರೂ. ಬೆಲೆಯ 145 ಕಿಲೋ ಗಂಧವನ್ನು ವಶಪಡಿಸಿಕೊಂಡುದಲ್ಲದೆ, ಉದಯಕುಮಾರ್, ಸುಂದರ, ಶ್ರೀಧರ, ಸುರೇಶ, ಹರೀಶ, ರತ್ನಾಕರ, ಲಿಂಗಯ್ಯ ಎಂಬ 7 ಮಂದಿ ಅಪರಾಧಿಗಳನ್ನು ಬಂಧಿಸಿದ್ದಾರೆ. ಈ ಪೈಕಿ ಮೂವರು ಅಯ್ಯಪ್ಪನ ವೇಷ ತೊಟ್ಟವರೆಂಬುದು ಗಮನಾರ್ಹ.

ತಿದ್ದುಪಡಿ

ಈ ಸಂಚಿಕೆಯ 2ನೇ ಪುಟದ 'ತಿಳುವಳಿಕೆ' ಅಂಕಣದ ಕೊನೆಯಲ್ಲಿ '...ಅವು ಉಳಿವುಗಳ ಪ್ರಶ್ನೆ....' ಎಂದು ಓದಿಕೊಳ್ಳಿ.

—ಸಂ.

ಶೃಂಗೇರಿ: ಕೂಲಿ ಕಾರ್ಮಿಕರ ಚಳುವಳಿ

ಶೃಂಗೇರಿ : ಹಸಿರು ಕಾರ್ಡ್, ಜನತಾ ನಿವೇಶನ ಮತ್ತು ಮನೆ, ಐಆರ್‌ಡಿಪಿ ಸಾಲ, ಭಾಗ್ಯಜ್ಯೋತಿ, ಮಸಿಗೆ ಜನತಾ ಕಾಲೋನಿಗೆ ಬೀದಿ ದೀಪ ಮತ್ತು ನಲ್ಲಿ — ಈ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ಶೃಂಗೇರಿ ತಾ|| ಕೂಲಿ ಕಾರ್ಮಿಕರ ಸಂಘದ ನೆಮ್ಮಾರು ಶಾಖೆಯವರು ಹೊಸ ವರ್ಷದ ಮೊದಲ ದಿನದಿಂದ (1.1.90) ಚಳುವಳಿ ಆರಂಭಿಸಲಿದ್ದಾರೆ.

ಈ ಬಗ್ಗೆ ಈಗಾಗಲೇ ಸಂಬಂಧಪಟ್ಟವರಿಗೆಲ್ಲ ಮನವಿ ಸಲ್ಲಿಸಿದ್ದು ವ್ಯರ್ಥವಾಗಿದ್ದರಿಂದ ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಸಂಘದ ಅಧ್ಯಕ್ಷ ಕಲ್ಕುಳಿ ವಿಠಲ ಹೆಗ್ಡೆ ತಿಳಿಸಿದ್ದಾರೆ.

'ತಡೆಯಾಜ್ಞೆಯ ಟೆಲಿಗ್ರಾಂ ಉಲ್ಲಂಘಿಸಿ'

ನಿವೇಶನಗಳ ವಿತರಣೆ

ಕೊಪ್ಪ : ಮೇಲಿನಪೇಟೆ ಶಾಲೆಯ ಹಿಂಭಾಗ ಸ.ನಂ. 77ರಲ್ಲಿ ಪುರಸಭೆ ವತಿಯಿಂದ ಕಡಿಮೆ ಆದಾಯ ವರ್ಗದ 137 ಜನರಿಗೆ ಮಂಜೂರಾಗಿದ್ದ ನಿವೇಶನಗಳ ಹಕ್ಕುಪತ್ರ ನೀಡುವ ಕಾರ್ಯ ಡಿ 26ರಂದು ವಿವಾದಾತ್ಮಕ ಸನ್ನಿವೇಶದಲ್ಲಿ ಯಥಾವಿಧಿ ನಡೆಯಿತು.

ಈ ಫಲಾನುಭವಿಗಳ ಆಯ್ಕೆಯನ್ನೂ ಅವರಿಗೆ ನಿವೇಶನ ನೀಡಿಕೆಯನ್ನೂ ಈಗಾಗಲೇ ಜಿ.ಪ ಮಂಜೂರು ಮಾಡಿದೆ. ಆದರೆ, ನಿವೇಶನದ ಮೊಬಲಗು ಕಟ್ಟಲು 4 ಕಂತು ನೀಡಲು ಅವಕಾಶವಿರುವಾಗ ಒಂದೇ ಕಂತಿನಲ್ಲಿ ಕಟ್ಟಿಸಿಕೊಳ್ಳುವುದನ್ನು ಸದಸ್ಯ ಶೀನ ಭಂಡಾರಿ ಆಕ್ಷೇಪಿಸಿದ್ದ ಹಿನ್ನೆಲೆಯಲ್ಲಿ ಜಿ. ಪ. ಕಾರ್ಯದರ್ಶಿ ಅಧ್ಯಕ್ಷರಿಗೆ ಟೆಲಿಗ್ರಾಂ ಮೂಲಕ ತಡೆಯಾಜ್ಞೆ ನೀಡಿದ್ದರೆನ್ನಲಾಗಿದೆ.

ಆದರೆ, ಟೆಲಿಗ್ರಾಂ ಯಾರು ಬೇಕಾದರೂ ನೀಡಬಹುದೆಂಬ ನೆಲೆಯಲ್ಲಿ, ಮೊದಲೇ ದಿನಾಂಕ ನಿಗದಿಪಡಿಸಿದ್ದ ಪ್ರಕಾರ ಅಧ್ಯಕ್ಷರೇ ಸದಸ್ಯರುಗಳ ಸಮ್ಮುಖದಲ್ಲಿ ಲಾಟರಿ ಎತ್ತುವ ಮೂಲಕ ನಿವೇಶನಗಳ ಹಂಚಿಕೆ ಕೈಗೊಂಡು ಸಾಗುವಳಿ ಚೀಟಿ ವಿತರಿಸಿದರು. 100 ಜನ ಹಣ ಕಟ್ಟಿ ಸಾಗುವಳಿ ಚೀಟಿ ಪಡೆದರೆಂದೂ, ಉಳಿದವರಿಗೂ ಕಾಲಾವಕಾಶ ಕೊಡಲಾಗಿದೆಯೆಂದೂ, ಶೀನ ಭಂಡಾರಿಯವರ ಮಗ ಸತೀಶ ಕೂಡ ಪೂರ್ತಿ ಹಣ ಕಟ್ಟಿ ಸಾಗುವಳಿ ಚೀಟಿ ಪಡೆದಿರುವುದಾಗಿಯೂ ಅಧ್ಯಕ್ಷರು 'ಮುಂಜಾವು'ಗೆ ತಿಳಿಸಿದರು.

ತಡೆಯಾಜ್ಞೆ ಇರುವುದರಿಂದ ಮನೆ ಕಟ್ಟಲು ಪರವಾನಗಿ ನೀಡಿಕೆ ಮುಂತಾಗಿ ಮುಂದಿನ ಯಾವುದೇ ಕ್ರಮ ಕೈಗೊಳ್ಳದಂತೆ ಇದೀಗ ಜಿ. ಪ. ಕಾರ್ಯದರ್ಶಿಗಳ ಆದೇಶ ಬಂದಿರುವುದಾಗಿ ತಿಳಿದು ಬಂದಿದೆ. ಆದರೆ ಇದರಿಂದ ಫಲಾನುಭವಿಗಳಿಗೆ ಯಾವ ರೀತಿ ನಷ್ಟವೂ ಆಗುವುದಿಲ್ಲವೆನ್ನಲಾಗಿದ್ದು ಸಮಸ್ಯೆ ಬಗೆಹರಿಸಲು ಅಧ್ಯಕ್ಷರು ಕೂಡಲೇ ಜಿ.ಪ.ಗೆ ಹೋಗುವುದಾಗಿ ತಿಳಿದು ಬಂದಿದೆ.

ನೈಸರ್ಗಿಕ ಕೃಷಿ ಕುರಿತು ಮತ್ತೊಮ್ಮೆ ಸಂಕಿರಣ

ಕೊಪ್ಪ: ನೈಸರ್ಗಿಕ ಕೃಷಿಯ ತಜ್ಞ ಧಾರವಾಡದ ಪ್ರದೀಪ್ ತಪಸ್ ಡಿ. 24 ರಂದು ಇಲ್ಲಿ ನಡೆಸಿದ ವಿಚಾರ ಸಂಕಿರಣದ ನಂತರ ರೈತರ ಕೋರಿಕೆಯ ಮೇರೆಗೆ ಮಾಹಿತಿ ಮತ್ತು ಸ್ಲೈಡ್ ಪ್ರದರ್ಶನಗಳನ್ನೊಳಗೊಂಡ ಕಾರ್ಯಾಗಾರವನ್ನು ಮತ್ತೊಮ್ಮೆ ನಡೆಸಿಕೊಡಲು ಒಪ್ಪಿದ್ದಾರೆ. ಜನವರಿ ಕೊನೆಯೊಳಗೆ ನಡೆಸಲು ಉದ್ದೇಶಿಸಿರುವ ಈ ಕಾರ್ಯಕ್ರಮದ ನಿರ್ದಿಷ್ಟ ದಿನಾಂಕ ಇಷ್ಟರಲ್ಲೇ ಗೊತ್ತಾಗಲಿದೆ.

ದ.ಕ. ಗಡಿಯಲ್ಲಿ ಶೃಂಗೇರಿ ಪೋಲೀಸರಿಂದ

ಗಂಧ, ಕಾರು ವಶ, 6 ಜನರ ಬಂಧನ

ಶೃಂಗೇರಿ : ಇಲ್ಲಿನ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಪಾಪಯ್ಯ ಮತ್ತು ಸಿಬ್ಬಂದಿ ಡಿ 30 ರ ಬೆಳಗಿನ ಜಾವ ಶೃಂಗೇರಿ-ಮಂಗಳೂರು ರಸ್ತೆಯ ದ. ಕ. ಗಡಿಯಲ್ಲಿ ಮಂಗಳೂರು ಕಡೆಗೆ ಹೋಗುತ್ತಿದ್ದ ಕೆ.ಎಂ.ವೈ.ಕೆ. 1247 ನಂಬರಿನ ಕಾರನ್ನು ತಡೆದು 12 ಸಾವಿರ ರೂ. ಬೆಲೆಯ 90 ಕಿಲೋ ಗಂಧ ವಶಪಡಿಸಿಕೊಂಡಿದ್ದಾರೆ.

ತಪ್ಪಿಸಿಕೊಳ್ಳಲೆತ್ನಿಸಿದ ಕಾರನ್ನು ಬೆನ್ನಟ್ಟಿ, ಆರೋಪಿಗಳು ಬಿದ್ದು ಓಡಿದರೂ ಬಿಡದೆ ಎಲ್ಲ ಆರು ಮಂದಿ ಅಪರಾಧಿಗಳನ್ನೂ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅವರಲ್ಲಿ ಶ್ರೀಧರ ಎಂಬವ ನ.ರಾ. ಪುರದವನು, ಉಳಿದವರು ಕಾಸರಗೋಡಿನವರು. ದ. ಕ. ಗಡಿಯಲ್ಲಿದ್ದ ಅರಣ್ಯ ಇಲಾಖೆ ಸಿಬ್ಬಂದಿಗಳೂ ಈ ಕಾರ್ಯಾಚರಣೆಯಲ್ಲಿ ಸಹಕರಿಸಿದರು.

ಈ ಮಾರ್ಗದಲ್ಲಿ ಗಂಧದ ಕಳ್ಳಸಾಗಣೆ ತೀವ್ರವಾಗಿ ಹೆಚ್ಚಿರುವ ವರದಿಗಳಿವೆ. ಕಳೆದ ವಾರ ಈ ಮಾರ್ಗದ ರಾತ್ರಿ ಬಸ್ಸಿನಿಂದ ಗಂಧದ ಸಹಿತ ಇಳಿದ ಇಬ್ಬರು ಯುವಕರನ್ನು 1988ರಲ್ಲಿ ಶೃಂಗೇರಿ ವಲಯ ಅರಣ್ಯಾಧಿಕಾರಿ ಮುನಿಸ್ವಾಮಿ ಅವರು, ಗಂಧಕಳ್ಳರನ್ನು ಮಾಲು ಸಹಿತ ಹಿಡಿದು, ಬಸ್ಸನ್ನು ವಶಕ್ಕೆ ತೆಗೆದುಕೊಂಡಿದ್ದನ್ನೂ, ಕಳೆದ ತಿಂಗಳು ಶೃಂಗೇರಿ ಪೋಲೀಸರು ಬಸ್‌ಸ್ಟ್ಯಾಂಡಿನಲ್ಲೇ ನಾಲ್ವರು ಗಂಧ ಕಳ್ಳರನ್ನು ಮಾಲುಸಹಿತ ಬಂಧಿಸಿದ್ದನ್ನೂ ಇಲ್ಲಿ ಸ್ಮರಿಸಬಹುದು.

ಬಿದ್ಧಗೋಡಿನಲ್ಲಿ ಕಲ್ಯಾಣ ಮಂದಿರ ಶಂಕುಸ್ಥಾಪನೆ

ಬಿದರಗೋಡು: ಸಾರ್ವಜನಿಕರಿಂದ ಇಲ್ಲಿ ನಿರ್ಮಾಣಗೊಳ್ಳಲಿರುವ ಕಲ್ಯಾಣ ಮಂದಿರದ ಶಂಕುಸ್ಥಾಪನೆಯನ್ನು ಡಿ. 25ರಂದು ಹರಿಹರಪುರ ಮಠಾಧೀಶರು ನೆರವೇರಿಸಿದರು. ಈ ಸಂದರ್ಭದಲ್ಲಿ ಆಗುಂಬೆಯ ಇಸಾಕ್ ಸಾಹೇಬ್ ಅವರು 1001 ರೂ. ದೇಣಿಗೆ ನೀಡಿದರು. ಐ. ಜಿ. ದುಗ್ಗಪ್ಪ ನಾಯಕ್ ಸ್ವಾಗತಿಸಿ, ಬಿ. ಎಸ್. ವೆಂಕಟೇಶ ಭಟ್ ವಂದಿಸಿದರು.

ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪನೆಗೆ ಸಿಪಿಐ ಒತ್ತಾಯ

ಕೊಪ್ಪ : ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕುಗಳ ಮೂಲೆ ಮೂಲೆಯ ಹಳ್ಳಿಗಳಿಗೆ ಅನುಕೂಲವಾಗುವಂತೆ ಕೊಪ್ಪದಲ್ಲಿ ಒಂದು ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷದ ಕೊಪ್ಪ ಘಟಕ ಸರ್ಕಾರವನ್ನು ಒತ್ತಾಯಿಸಿದೆ.

ಈ ಎಲ್ಲ ಹಳ್ಳಿಗಳವರಿಗೆ ನ. ರಾ. ಪುರ ಬಹಳ ದೂರವಾಗಿದ್ದು, ಶೃಂಗೇರಿ ಮತ್ತು ಬಾಳೆಹೊನ್ನೂರಿಗೆ ಕೂಡ ಮಧ್ಯಮ ದೂರದಲ್ಲಿರುವ ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪಿಸುವುದು ಯೋಗ್ಯವಾಗಿದೆ.

ಆದರೆ ಈ ಬಗ್ಗೆ ಈಗಾಗಲೇ ಹಲವಾರು ವರ್ಷಗಳಿಂದ ಹಲವಾರು ಬಾರಿ ಸರ್ಕಾರವನ್ನು ಒತ್ತಾಯಿಸಿದ್ದರೂ ನಿರ್ಲಕ್ಷ್ಯ ಧೋರಣೆ ತಾಳಿದ್ದು, ಕೂಡಲೇ ಈ ವಿಚಾರವನ್ನು ಸಂಬಂಧಪಟ್ಟವರು ಸರ್ಕಾರದ ಗಮನಕ್ಕೆ ತರಬೇಕೆಂದು ಡಿ. 17 ರಂದು ಎ. ಎಸ್. ದಿವಾಕರ್ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ಸಭೆ ಒತ್ತಾಯಿಸಿದೆ.

ಏಕಮುಖ ಸಂಚಾರ

ಕೊಪ್ಪದ ಕಾನ್ವೆಂಟ್ ರಸ್ತೆಯ ಎರಡೂ ಕಡೆ ಶಾಲೆಗಳಿದ್ದು, ಈ ರಸ್ತೆಯಲ್ಲಿ ನೀರಿನ ಟ್ಯಾಂಕ್ ಕಡೆಯಿಂದ ವಾಹನಗಳ ಸಂಚಾರ ನಿಷೇಧಿಸಬೇಕೆಂದು ಒತ್ತಾಯಿಸಿದ ಸಭೆ, ಈ ದಿಕ್ಕಿನಲ್ಲಿ ಕೂಡಲೇ ಸಂಬಂಧಪಟ್ಟವರು ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟ ನಡೆಸಲು ನಿರ್ಧರಿಸಿತು.

ಪರಿಸರವನ್ನು ಕೆಡಿಸದೆ, ಭೂಮಿಯ ಸಹಜ ಸತ್ವವನ್ನು ಹೆಚ್ಚಿಸಿ

ಕೃಷಿ ಉತ್ಪಾದನೆ ವೃದ್ಧಿಸುವ 'ನೈಸರ್ಗಿಕ ಕೃಷಿ'

ಕೃಷಿ ಬೆಳೆಗಳಿಗೆ ಯಾವುದೇ ರೀತಿಯ ಗೊಬ್ಬರವನ್ನಾಗಲಿ, ಕ್ರಿಮಿ-ಕೀಟ ನಾಶಕ, ಕಳೆ ನಾಶಕಗಳನ್ನಾಗಲಿ ಬಳಸದೆ, ರೈತನ ಹಸ್ತಕ್ಷೇಪವನ್ನು ಅತ್ಯಂತ ಕಡಿಮೆ ಮಾಡಿ, ಪ್ರಕೃತಿ ನಿಯಮದಂತೆಯೇ ಬೆಳೆಗಳನ್ನು ಬೆಳೆಯುವ ಮೂಲಕ ಕೃಷಿಯ ಖರ್ಚನ್ನು ಅಗಾಧವಾಗಿ ಕಡಿಮೆಮಾಡುವುದಲ್ಲದೆ ಭೂಮಿಯ ಸಾರವನ್ನೂ, ಬೆಳೆಗಳ ಸತ್ವ ಮತ್ತು ನಿರೋಧಕ ಶಕ್ತಿಯನ್ನೂ ಅತ್ಯಧಿಕಗೊಳಿಸುವುದು-ಜಪಾನಿನ ಕೃಷಿ ಋಷಿ ಫುಕುವೋಕಾ ಅವರ 'ಸಹಜ ಕೃಷಿ ಪದ್ಧತಿ'.

ಆದರೆ, ತುರ್ತಾಗಿ ಹೆಚ್ಚು ಹೆಚ್ಚು ಕೃಷಿ ಉತ್ಪಾದನೆ ಬೇಕಾಗಿರುವ ಪರಿಸ್ಥಿತಿಯಲ್ಲಿ, ಭೂಮಿಯ ಸಾರ ಮತ್ತು ಜೈವಿಕ ಚಟುವಟಿಕೆಗಳನ್ನು ಮಾತ್ರ ಹೆಚ್ಚಿಸಿ, ಪರಿಸರವನ್ನೂ ಬೆಳೆಗಳ ಸ್ವ-ಶಕ್ತಿಯನ್ನೂ ಕುಂದಿಸದೆ, ಪ್ರಾಕೃತಿಕವಾದಂಥವೇ ಆದ ಗೊಬ್ಬರ ಮತ್ತು ಕ್ರಿಮಿ-ಕೀಟ ನಾಶಕಗಳನ್ನು ಬಳಸಿ ಅತಿ ಹೆಚ್ಚು ಫಸಲು ಪಡೆಯುವ ವಿಧಾನ 'ನೈಸರ್ಗಿಕ ಕೃಷಿ'.

ಅಮೆರಿಕ ಮತ್ತು ಯೂರೋಪಿನ ದೇಶಗಳ ಕೃಷಿ ಪದ್ಧತಿಯಾದ ಇದನ್ನು ಭಾರತದಲ್ಲಿ ಬಳಕೆಗೆ ತಂದಿರುವ ಇಂಜಿನಿಯರ್-ರೈತ ಧಾರವಾಡದ ಪ್ರದೀಪ್ ತಪಸ್ ಕೊಪ್ಪದಲ್ಲಿ ಡಿ. 24 ರಂದು ಈ ವಿಧಾನದ ಬಗ್ಗೆ ವಿಚಾರ ಸಂಕಿರಣವೊಂದನ್ನು ನಡೆಸಿಕೊಟ್ಟರು. ಅಲ್ಲಿ ಮಂಡಿಸಿದ ವಿಚಾರಗಳ ಸಾರಾಂಶವನ್ನು (ನಾವು ಗ್ರಹಿಸಿದಂತೆ) ಇಲ್ಲಿ ಕೊಡಲಾಗಿದೆ.

●ಸಿರಿಮನೆ ನಾಗರಾಜ್ ಮತ್ತು ಕೆ. ಎಲ್. ರಾಜೇಂದ್ರ

ಇಂದು ದಿಢೀರಾಗಿ ಕೃಷಿ ಉತ್ಪಾದನೆಯನ್ನು ಅತ್ಯಧಿಕಗೊಳಿಸುವ ಪ್ರಯತ್ನವಾಗಿ, ಸುಧಾರಿತ, ಆಧುನಿಕ ಕೃಷಿಯ ಹೆಸರಲ್ಲಿ, ರೈತರು ತಮ್ಮ ಜಮೀನುಗಳಿಗೆ ರಾಸಾಯನಿಕ ಗೊಬ್ಬರಗಳು ಹಾಗೂ ಕ್ರಿಮಿ-ಕೀಟ-ಕಳೆ ನಾಶಕಗಳನ್ನು ಯದ್ವಾತದ್ವಾ ಸುರಿಯುತ್ತಿದ್ದಾರೆ. ಇದರಿಂದ ಉತ್ಪಾದನೆ ಎರಡು ಪಟ್ಟಾಗಿರುವುದು ನಿಜವಿದ್ದರೂ ಕೃಷಿಯ ಖರ್ಚು 8-9 ಪಟ್ಟಾಗಿ, ರೈತರು ತತ್ತರಿಸುತ್ತಿದ್ದಾರೆ.

ಇತ್ತ, ರೈತರು ಭೂಮಿಗೆ ಹಾಕುವ ಗೊಬ್ಬರದ ಸಾರವನ್ನು ಗಿಡಗಳು ಹೀರಿಕೊಳ್ಳಲು ಸುಲಭವಾಗುವ ರೂಪಕ್ಕೆ ಪರಿವರ್ತಿಸಿ, ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ಬ್ಯಾಕ್ಟೀರಿಯಗಳೂ, ಮಣ್ಣನ್ನು ಸಡಿಲಗೊಳಿಸಿ ಗಾಳಿಯಾಡುವಂತೆ ಹಾಗೂ ಬೇರುಗಳು ಸುಲಭವಾಗಿ ನೆಲಕ್ಕಿಳಿಯುವಂತೆ ನೆರವಾಗುತ್ತಿದ್ದ ಎರೆಹುಳುಗಳೂ ಈ ರಾಸಾಯನಿಕ ವಸ್ತುಗಳಿಂದಾಗಿ ನಾಶವಾಗುತ್ತಿವೆ. ಅಥವಾ ಭೂಮಿಯಲ್ಲಿ ಆಳಕ್ಕೆ ಸೇರಿಕೊಳ್ಳುತ್ತಿವೆ

ಇದರಿಂದ ಕ್ರಮೇಣ ಭೂಮಿ ಬರಡಾಗುತ್ತಿದೆ; ಬೆಳೆಗಳು ತಮ್ಮ ಸಹಜ ರೋಗ ನಿರೋಧಕ ಶಕ್ತಿ ಕಳೆದುಕೊಳ್ಳುತ್ತಿವೆ; ಪರಿಸರ ಹದಗೆಟ್ಟು, ಆಹಾರ ಧಾನ್ಯಗಳು ವಿಷಪೂರಿತವಾಗುತ್ತಿವೆ ಹಾಗೂ ಉತ್ಪಾದನೆ ಕೂಡ ಕುಸಿಯುವ, ಖರ್ಚು ನಿಭಾಯಿಸಲಾರದಷ್ಟಾಗುವ ಅಪಾಯ ಎದುರಾಗಿದೆ.

ಇವೆಲ್ಲಕ್ಕೆ ಪರಿಹಾರ ರೂಪವಾದ ನೈಸರ್ಗಿಕ ಕೃಷಿ ವಿಧಾನದಲ್ಲಿ, ನೈಸರ್ಗಿಕವಾಗಿ ಸಹಜವಾಗಿಯೇ ಲಭ್ಯವಿರುವ ಪದಾರ್ಥಗಳಿಂದ ಭೂಮಿಯ ಸಾರ ವೃದ್ಧಿ ಹಾಗೂ ಬೆಳೆಗಳ ರೋಗ ಮತ್ತು ಕ್ರಿಮಿ-ಕೀಟಗಳ ನಿವಾರಣೆ, ಬೀಜ ಬಿತ್ತುವ ಮತ್ತು ನಾಟಿ ಮಾಡುವ ಕ್ರಮದಲ್ಲಿ ಸುಧಾರಣೆ ಮತ್ತು ಪುರಾತನ ಭಾರತೀಯ 'ಅಗ್ನಿಹೋತ್ರ' ವಿಧಾನದಿಂದ ಓಝೋನ್ ಪದರ ನಿರ್ಮಿಸುವ ಮೂಲಕ ಇನ್‌ಫ್ರಾ-ರೆಡ್ ಕಿರಣಗಳನ್ನು ತಡೆಯುವುದು ಹಾಗೂ ಮಳೆಯನ್ನು ಹೆಚ್ಚಿಸುವುದು — ಇವು ಮುಖ್ಯವಾಗಿವೆ.

ಸಮೃದ್ಧ 'ಕಾಂಪೋಸ್ಟ್'

ಉತ್ತಮ ಸಾವಯವ ಗೊಬ್ಬರವಾದ ಹಟ್ಟಿಯ ಗೊಬ್ಬರ ಅಥವಾ ತಿಪ್ಪೆ ಗೊಬ್ಬರ ಕೃಷಿಗೆ ಅತ್ಯುತ್ತಮ ಎಂಬುದು ಸರ್ವವಿದಿತ. ಇದನ್ನು ಇನ್ನಷ್ಟು ಸಮೃದ್ಧವಾಗಿಸುವ ಕಾಂಪೋಸ್ಟ್ ಕ್ರಮ ಇಲ್ಲಿದೆ: 6ಅಡಿ ಉದ್ದ, 3 ಅಡಿ ಅಗಲ ಮತ್ತು 3 ಅಡಿ ಆಳದ ಗುಂಡಿಯಲ್ಲಿ ಸೊಪ್ಪು, ಸಗಣಿ ಮತ್ತು ಮಣ್ಣನ್ನು ಒಂದಾದ ಮೇಲೊಂದರಂತೆ 3 ಅಂಗುಲದ ಪದರಗಳಲ್ಲಿ ಭರ್ತಿ ಮಾಡಬೇಕು. ಸೊಪ್ಪಿನ ಜೊತೆಗೆ (ಹಸಿರು ಸೊಪ್ಪು ಅಥವಾ ದರಗು) ಅಡಿಕೆ ಹಾಳೆ, ಸಿಪ್ಪೆ, ಸೋಗೆ, ಕಟ್ಟಿಗೆಯ ಜಿಗು

(3ನೇ ಪುಟಕ್ಕೆ)

ತಿಳುವಳಿಕೆ

ಶ್ರದ್ಧೆ ಮತ್ತು ಸ್ಪರ್ಧೆ

ಇದೇ ಶೀರ್ಷಿಕೆಯ ಜಿ. ಎಸ್. ಶಿವರುದ್ರಪ್ಪನವರ ಲೇಖನವೊಂದನ್ನು ಬಹಳ ಹಿಂದೆ 'ಸಾಧನೆ' ಪತ್ರಿಕೆಯಲ್ಲಿ ಓದಿದ ನೆನಪು. ಆ ಲೇಖನದ ಸಂದೇಶ ಮತ್ತು ಈ ಶೀರ್ಷಿಕೆ ಮಾತ್ರ ಈಗ ನೆನಪಿನಲ್ಲಿ ಉಳಿದಿದೆ. ಈ ದಿನಗಳಲ್ಲಿ ಎಲ್ಲೆಡೆ ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವ ಹೆಚ್ಚಿಸಲು ಬೇರೆ ಬೇರೆ ಸಂಘ-ಸಂಸ್ಥೆಗಳು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯನಿರತರಾಗಿರುವುದನ್ನು ನೋಡುವಾಗ-ನನಗೆ ಆ ಲೇಖನದ ಸಂದೇಶ ನೆನಪಾಗುತ್ತದೆ

ಹಾಗೆ 'ಸ್ಪರ್ಧಾಮನೋಭಾವ' ಇರುವುದು ಕೆಟ್ಟದು ಎಂದು ಶಿವರುದ್ರಪ್ಪನವರ ಆ ಲೇಖನ ಹೇಳುತ್ತದೆ-ಎಂದರೆ ನಿಮಗೆ ಆಶ್ಚರ್ಯವಾದೀತು. ಆದರೆ ಸ್ಪರ್ಧಾಮನೋಭಾವ ನಿಜಕ್ಕೂ ಅಪಾಯಕಾರಿ ಎನ್ನುವುದು ನನ್ನದೂ ಸ್ಪಷ್ಟ ಅಭಿಪ್ರಾಯ.

ಇತರರಿಗಿಂತ ತಾನು ಹೆಚ್ಚು, ಮೇಲು ಎನ್ನುವ ಅಹಂಕಾರವನ್ನು ಅದು ಗೆದ್ದವರಲ್ಲೂ, ಅಯ್ಯೋ ತಾನು ಗೆದ್ದಿಲ್ಲವಲ್ಲಾ ಎನ್ನುವ ಕೀಳರಿಮೆಯನ್ನು ಸೋತವರಲ್ಲೂ ಉಂಟುಮಾಡುತ್ತದೆ. ಪ್ರತಿಯೊಬ್ಬರ ಪ್ರತಿಭೆಯೂ ಅನನ್ಯವಾಗಿರುವುದರಿಂದ, ಸ್ಪರ್ಧೆಗೆ ಪೂರಕವಾದ ಪ್ರತಿಭೆಯವರು ಮಾತ್ರ ಗೆದ್ದು, ಇತರರು ತಮ್ಮ ಪ್ರಕೃತಿಗೆ ಹೊಂದಿಕೊಳ್ಳದ, ಆದರೆ ಸಾಮಾಜಿಕವಾಗಿ ಹೆಗ್ಗಳಿಕೆ ಪಡೆಯಬಹುದಾದ ಅಂತಹ ಪ್ರತಿಭೆ ಬೆಳೆಸಿಕೊಳ್ಳಲು, ವ್ಯರ್ಥ ಹೋರಾಟದಲ್ಲಿ ನಿರತರಾಗುವಂತೆ ಅದು ಮಾಡುತ್ತದೆ.

ಸಾಂಸ್ಕೃತಿಕ ಕಾರ್ಯಕ್ರಮಗಳು-ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆ ಪ್ರಕಾಶಕ್ಕೆ ಬರಲು ಪ್ರೇರಕವಾಗುವಷ್ಟಿರಬೇಕೇ ಹೊರತು, ಎಲ್ಲರೂ ಒಂದೇ ಚೌಕಟ್ಟಿನಲ್ಲಿ, ಒಂದೇ ವಿಧದಲ್ಲಿ ಯೋಚಿಸುವಂತೆ ಮಾಡುವ; ಭಾಷಣದ ವಿಷಯಕ್ಕಿಂತ ಭಾಷಣ ಮಾಡುವ ರೀತಿಯೇ ಮುಖ್ಯವಾಗುವ; ಅಂತಃಸತ್ವಕ್ಕಿಂತ ಹೊರ ತೋರಿಕೆಯೇ ಮೆರೆಯುವಂತಾಗುವ ಸ್ಪರ್ಧೆಗಳು ನಿಜಕ್ಕೂ ಅಪಾಯಕಾರಿ. ಈ ಅಪಾಯವನ್ನು ಗಮನಿಸಿಯೇ ಕ್ರಾಂತಿಕಾರಿ ಚಿಂತಕ ಜಿಡ್ಡು ಕೃಷ್ಣಮೂರ್ತಿ ಹೇಳಿದ್ದು :

"By comparing one with another, you commit murder, and by comparing yourself with another, you commit suicide."

ಅಂತಹ ಆತ್ಮಹತ್ಯೆ, ಕೊಲೆಗಳು ನಮ್ಮಲ್ಲೂ ಇತರರಲ್ಲೂ ಆಗಬಾರದು. ಎಂದಿದ್ದರೆ-ಸ್ಪರ್ಧಾಮನೋಭಾವವನ್ನಲ್ಲ, ಶ್ರದ್ಧಾಮನೋಭಾವವನ್ನು ಸ್ವತಃ ಸಾಕ್ಷಾತ್ಕರಿಸಿಕೊಂಡು, ಉಳಿದವರಲ್ಲೂ ಅದು ಜಾಗೃತವಾಗಲು ಸಹಕರಿಸಬೇಕು. ಯಾಕೆಂದರೆ ಶ್ರದ್ಧೆಯಲ್ಲಿ ಮೇಲು- ಕೀಳುಗಳ, ಸೋಲು-ಗೆಲವುಗಳ ಜೀವ ವಿರೋಧೀ ಅಂಶ ಇರುವುದಿಲ್ಲ.

ಇನ್ನೊಬ್ಬರಿಂದ ಹೊಗಳಿಸಿಕೊಳ್ಳಲಿಕ್ಕಾಗಿ ನಾವು ಏನನ್ನೂ ಮಾಡಬಾರದು. ಅದು ದುಃಖವನ್ನೂ, ಮನಸ್ತಾಪವನ್ನೂ ಉಂಟುಮಾಡುತ್ತದೆ. ಅದರ ಬದಲು-ನಮ್ಮಿಂದ ಆದಷ್ಟು ಮಾತ್ರ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವಂತಾಗಬೇಕು. ಅಂತಹ ಮನೋಧರ್ಮಕ್ಕೆ ಶ್ರದ್ಧೆ ಎನ್ನುವುದು. ದ್ವೇಷ, ಅಸೂಯೆ, ಮನಸ್ತಾಪಗಳಿಂದ ಛಿದ್ರಛಿದ್ರವಾಗಿರುವ ನಮ್ಮ ಸದ್ಯದ ಪ್ರಪಂಚಕ್ಕೆ ಬೇಕಾಗಿರುವುದು - ಸ್ಪರ್ಧಾಮನೋಭಾವವಲ್ಲ, ಶ್ರದ್ಧಾಮನೋಭಾವ. ಅಷ್ಟಾಗಿ ಈ ಸ್ಪರ್ಧೆ ಬಂಡವಾಳಶಾಹೀ ವ್ಯವಸ್ಥೆಯ ಶನಿಸಂತಾನ. ಬುದ್ಧ, ಮಾರ್ಕ್ಸ್‌ಗಳು ಕನಸಿದ ಸಂಘ ಜೀವನದಲ್ಲಿ ಸ್ಪರ್ಧೆಗೆ ಅವಕಾಶವಿಲ್ಲ.

ಇನ್ನು ಈ ಶ್ರದ್ಧೆ, ಸ್ಪರ್ಧೆಗಳು ಜೀವನದ ವಿವಿಧ ಕ್ಷೇತ್ರಗಳಲ್ಲಿ ಹೇಗೆ ವರ್ತಿಸುತ್ತಿವೆ ನೋಡೋಣ.

1. ವೈಯಕ್ತಿಕ ಜೀವನದಲ್ಲಿ ಸ್ಪರ್ಧೆ ಅಹಂಕಾರವನ್ನು ಉದ್ರೇಕಿಸಿ ದುರಂತಕ್ಕೆಡೆ ಮಾಡಿಕೊಟ್ಟರೆ ಶ್ರದ್ಧೆ ಅಹಂಕಾರ ಶಮನ ಮಾಡಿ ಆತ್ಮಸಾಕ್ಷಾತ್ಕಾರಕ್ಕೆಡೆಮಾಡಿ ಕೊಡುತ್ತದೆ.

2. ಸಾಮಾಜಿಕ ಜೀವನದಲ್ಲಿ-ಪಕ್ಕದ ಮನೆಯವರು ಕಾರು ತೆಗೆದುಕೊಂಡರೆಂದು ತಮಗೆ ಅಗತ್ಯವಿಲ್ಲದಿದ್ದರೂ ಸಾಲ ಮಾಡಿ ಕಾರು ತೆಗೆದುಕೊಳ್ಳುವುದು; ಹೆಂಗಳರ ಪ್ರಪಂಚದ ಚಿನ್ನ, ಸೀರೆ, ಪಾತ್ರೆ, ಟಿ. ವಿ, ಫ್ರಿಜ್‌ಗಳ ಬಗೆಗಿನ ಪೈಪೋಟಿ-ಎಲ್ಲ ಸ್ಪರ್ಧಾಮನೋಭಾವದ ಚೇಷ್ಟೆಗಳು. ಶ್ರದ್ಧಾಮನೋಭಾವದವರು ಹೆರರ ಹೊಗಳಿಕೆ, ಮೆಚ್ಚುಗೆಗಾಗಿ ಏನನ್ನೂ ಮಾಡುವುದಿಲ್ಲ. ಆದರೆ ತಮಗೆ 'ಸರಿ' ಎಂದು ಕಂಡದ್ದನ್ನು-ಇಡೀ ಸಮಾಜವನ್ನು ಎದುರಿಸಿ

3. ಸಾಹಿತ್ಯ ಕ್ಷೇತ್ರದಲ್ಲಿ-ಸಾಹಿತ್ಯ ವ್ಯಕ್ತಿಯೊಬ್ಬನ ಸ್ಪರ್ಧಾಮನೋಭಾವದ ಅಭಿವ್ಯಕ್ತಿ ಆದಾಗಲೆಲ್ಲಾ ಅತಿ ಕೆಟ್ಟ 'ಬೆಸ್ಟ್ ಸೆಲ್ಲರ್ಸ್' (Best Sellers) ಗಳ ಹುಟ್ಟಿಗೆ ಕಾರಣವಾಗಿದೆ. ಸಾಹಿತ್ಯ ಶ್ರದ್ಧೆಯ ಅಭಿವ್ಯಕ್ತಿ ಆದಾಗಲೆಲ್ಲಾ ಬದುಕಿನ ಗಂಭೀರ ಶೋಧ ಆಗಿ, ಮೇರು ಕೃತಿ (Classic) ಗಳ ಸೃಷ್ಟಿಯಾಗಿದೆ.

4. ಮತ ಧರ್ಮಗಳ ಪ್ರಪಂಚದಲ್ಲಿ-ದೂರ ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ಮೊದಲುಗೊಂಡು, ಹತ್ತಿರದ ಅಂಗಳದ ಸೆಗಣಿಯ ಮೇಲೆ ಗುಂಯ್‌ಗುಡುವ ನೊಣದವರೆಗಿನ ಎಲ್ಲವೂ, ಎಲ್ಲರೂ ಒಂದೇ ಮಹಾ ಶಕ್ತಿಯ ಮಕ್ಕಳು ಎಂದು ನಂಬಿ, ಸಹಬಾಳ್ವೆ ನಡೆಸಲು ಪ್ರಯತ್ನಿಸುವುದು ಶ್ರದ್ಧಾಮೂಲವಾದ ಧರ್ಮ. 'ಬಾಬರಿ ಮಸೀದಿ-ರಾಮಜನ್ಮ ಭೂಮಿ'ಗಳ ಹೆಸರಿನಲ್ಲಿ-ಸಾವಿಗೆ, ನೋವಿಗೆ, ರಕ್ತಪಾತಕ್ಕೆ ಕಾರಣವಾಗುವ ಜಾತಿ, ಮತ ಭೇದಗಳ ಧರ್ಮ-ಸ್ಪರ್ಧಾಮೂಲವಾದದ್ದು ಆದುದರಿಂದ ಅಪಾಯಕಾರಿ.

ಹೀಗೆ ಒಂದಲ್ಲ, ಎರಡಲ್ಲ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ನಾವು ಈ ಶ್ರದ್ಧೆ-ಸ್ಪರ್ಧೆಗಳ ಪ್ರಭಾವ, ಪರಿಣಾಮಗಳನ್ನು ನೋಡಬಹುದು. ಈ ಎರಡರಲ್ಲಿ ಯಾವುದು ಜೀವನಪರ, ಯಾವುದು ಜೀವನವಿರೋಧಿ-ಎನ್ನುವುದನ್ನು ಇನ್ನು ನೀವೇ ನಿರ್ಧರಿಸಿ. ಅಂತರ ರಾಷ್ಟ್ರೀಯ ರಾಜಕಾರಣದ ಶಸ್ತ್ರಗಳ ಸ್ಪರ್ಧೆ ನೋಡುವಾಗ, ಇದು ನಮ್ಮ 'ಇರುವುದೊಂದೇ ಭೂಮಿ'ಯ ಅಳಿವು ಉಳಿವುಗಳ ಪತ್ರ ಕೂಡಾ ಹೌದು! ಅನ್ನಿಸುವುದಲ್ಲವೆ?

ನೈಸರ್ಗಿಕ ಕೃಷಿ

(2ನೇ ಪುಟದಿಂದ)

ಮುಂತಾದುವನ್ನೂ ಸೇರಿಸಬಹುದು. ಗುಂಡಿಯ ಉದ್ದಗಲ ಹೆಚ್ಚು-ಕಡಿಮೆ ಮಾಡಬಹುದು, ಆಳ ಕಡಿಮೆ ಇರಬಹುದು, ಆದರೆ 3 ಅಡಿಗಿಂತ ಜಾಸ್ತಿಯಾಗಬಾರದು. ಹೀಗೆ ತುಂಬಿ, ಮೇಲ್ಗಡೆ ನಾಲ್ಕಾರು ತುರಿಕೆ ಸೊಪ್ಪಿನ ಗಿಡಗಳನ್ನು (ತುರ್ಸನಿಗೆ ಅಥವಾ ತುರ್ಚಿ) ಹಾಕಿ, ಎರಡೂವರೆ ಔನ್ಸಿನಷ್ಟು ಜೇನು ತುಪ್ಪವನ್ನು ಸ್ವಲ್ಪ ನೀರಿನಲ್ಲಿ ಬೆರೆಸಿ ಸಿಂಪಡಿಸಿ, 20 ಕೊಡ ನೀರು ಹುಯ್ಯಬೇಕು. ನಂತರ 1 ಅಡಿ ಮಣ್ಣು ಮುಚ್ಚಿ, 90 ದಿನ ಕೊಳೆಯಲು ಬಿಡಬೇಕು. ನಂತರ ಹೊರ ತೆಗೆದು ಪೂರ್ತಿಯಾಗಿ ಒಂದೇ ಬಾರಿಗೆ ಜಮೀನಿಗೆ ಸೇರಿಸಬೇಕು.

ತುರಿಕೆ ಗಿಡ ಬ್ಯಾಕ್ಟೀರಿಯಗಳನ್ನು ವಿಪುಲವಾಗಿ ಒದಗಿಸುತ್ತದೆ ಜೇನು ತುಪ್ಪ ಎರೆಹುಳುಗಳನ್ನು ಆಕರ್ಷಿಸಿ, ಬ್ಯಾಕ್ಟೀರಿಯಗಳ ಚಟುವಟಿಕೆ ಇನ್ನಷ್ಟು ತೀವ್ರಗೊಳ್ಳಲು ಕಾರಣವಾಗುತ್ತದೆ. ಇಂಥ 6'×3'×3' ಗುಂಡಿಯ ಗೊಬ್ಬರ 1 ಎಕರೆಗೆ ಸಾಕು. ಇದರಲ್ಲಿ ಸರಿಸುಮಾರು 16 ಚೀಲ ಸಾರಜನಕ (N), 10 ಚೀಲ ಪೊಟ್ಯಾಶ್ (K) ಮತ್ತು 24 ಚೀಲ ರಂಜಕ (P) ಇರುತ್ತದೆ.

ಕಾಂಪೋಸ್ಟ್ ಗೊಬ್ಬರ ಹಾಕುವ ಮುಖ್ಯ ಉದ್ದೇಶ ಪೋಷಕಾಂಶಗಳ ಪೂರೈಕೆಯ ಜೊತೆಗೆ ಬ್ಯಾಕ್ಟೀರಿಯ ಮತ್ತು ಎರೆಹುಳುಗಳನ್ನು ವೃದ್ಧಿಸುವುದು. ಆದ್ದರಿಂದ ಇದಿಷ್ಟು 10 ವರ್ಷಗಳಿಗೆ ಸಾಕಾಗುತ್ತದೆ, (ಮಳೆ ನೀರಿನಿಂದ ಕೊಚ್ಚಿ ತೊಳೆದು, ಇಂಗಿ ಹೋಗದ ಪ್ರದೇಶಗಳಲ್ಲಿ). ಪ್ರತಿ ವರ್ಷ ಕೊಟ್ಟರೆ ಇನ್ನೂ ಉಪಯುಕ್ತ. ಇದರ ಜೊತೆಗೆ ಎಕರೆಗೆ 500 ಕಿಲೊ ಬೇವಿನ ಅಥವಾ ಹೊಂಗೆ ಹಿಂಡಿ (N), 100 ಕಿಲೊ ಮೀನಿನ ಪುಡಿ (P) ಮತ್ತು 50 ಕಿಲೊ ಬೂದಿ (K) ಕೊಡಬೇಕು.

ಸುಣ್ಣ ಯದ್ವಾ ತದ್ವಾ ಬೇಕಿಲ್ಲ. 5 ವರ್ಷಕ್ಕೊಮ್ಮೆ ಎಕರೆಗೆ 25 ಕಿಲೊ ಸಾಕು. ರಾಕ್ ಫಾಸ್ಫೇಟ್ ಮತ್ತು ಮ್ಯೂರೇಟ್ ಆಫ್ ಪೊಟ್ಯಾಶ್‌ಗಳೂ ನೈಸರ್ಗಿಕವಾದ್ದರಿಂದ ನಿರಪಾಯಕಾರಿ. ಆದರೆ ಸಾರಜನಕಯುಕ್ತವಾದ ಯಾವ ಗೊಬ್ಬರವೂ ನಿಷಿದ್ಧ.

ಮೊಳಕೆ, ನಾಟಿ

ಚಂದ್ರನ ಗುರುತ್ವಾಕರ್ಷಣ ಶಕ್ತಿ ಬೆಳೆಗಳ ಮೇಲೆ ಅಪಾರ ಪ್ರಭಾವ ಬೀರುತ್ತದೆ. ಇದು ವೈಜ್ಞಾನಿಕ ಸತ್ಯ. ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೆ ಬೇರುಗಳೂ, ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ ಕಾಂಡ ಮತ್ತು ಎಲೆಗಳೂ, ಬೆಳವಣಿಗೆ ಹೊಂದುತ್ತವೆ. ಆದ್ದರಿಂದ ಯಾವುದೇ ಬೀಜ ಅಮಾವಾಸ್ಯೆಯಂದು ಮೊಳಕೆ ಬರುವಂತೆ ಬಿತ್ತಬೇಕು. (ಆ ಬೀಜಕ್ಕೆ ಮೊಳಕೆಯೊಡೆಯಲು ಎಷ್ಟು ದಿನ ಬೇಕಾಗುತ್ತದೋ, ಅಮಾವಾಸ್ಯೆಗಿಂತ ಅಷ್ಟು ದಿನ ಮುಂಚಿತವಾಗಿ ಅದನ್ನು ಬಿತ್ತಬೇಕು.) ಅಂತೆಯೇ, ನಾಟಿ ಮಾಡುವ ಗಿಡಗಳನ್ನು ಹುಣ್ಣಿಮೆಯಂದೇ ನಾಟಿ ಮಾಡಬೇಕು. (ಈ ಲೆಕ್ಕಗಳು 1 ದಿನ ಹಿಂದಕ್ಕೋ ಮುಂದಕ್ಕೋ ಆದರೆ ಅಷ್ಟೊಂದು ದುಷ್ಪರಿಣಾಮವಿಲ್ಲ.)

ಬೇರು ಮತ್ತು ಕಾಂಡಗಳ ಬೆಳವಣಿಗೆಯ ಪ್ರಮಾಣ ತಪ್ಪಿದರೆ ಗಿಡ ರೋಗಕ್ಕೆ ತುತ್ತಾಗುವ ಸಂಭವ ಜಾಸ್ತಿ. ಆದ್ದರಿಂದ ಮೇಲ್ಕಂಡ ಲೆಕ್ಕಾಚಾರದ ಜೊತೆಗೆ, ನಾಟಿ ಮಾಡುವಾಗ ಗಿಡವನ್ನು ಅರ್ಧದವರೆಗೂ ಭೂಮಿಯೊಳಗಿರುವಂತೆ ನೆಡಬೇಕು. ಇದರಿಂದ ಬೆಳವಣಿಗೆಯ ಪ್ರಮಾಣ ಬದ್ಧತೆ ಉಳಿಯುವುದಲ್ಲದೆ, ಗಿಡಗಳು ಮಗುಚಿ ಬಿದ್ದು, ಅವುಗಳ ಆಹಾರದ ಕೊಳವೆ ಮುಡಿಚಿಕೊಳ್ಳುವ ಕಡೆ ಆಹಾರ ಸಾಗಣೆಯ ಶಕ್ತಿ ವ್ಯರ್ಥವಾಗದಂತೆಯೂ ತಡೆಯುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಅಮಾವಾಸ್ಯೆ-ಹುಣ್ಣಿಮೆಗಳನ್ನು ಟಿ.ವಿ.ಯಲ್ಲಿ ಮುಂಚಿತವಾಗಿ ಬಿತ್ತರಿಸಿದೊಡನೆ, 24 ರಿಂದ 48 ಗಂಟೆಗಳೊಳಗೆ ಇಡೀ ದೇಶದಲ್ಲಿ ಬಿತ್ತನೆಯೋ ನಾಟಿಯೋ ನಡೆದು ಹೋಗುತ್ತದೆ.

ಜೈವಿಕ ರೋಗ ನಿಯಂತ್ರಣ

ಬೆಳೆಗಳನ್ನು ಬಾಧಿಸುವ ರೋಗಾಣುಗಳು ಮತ್ತು ಕ್ರಿಮಿ-ಕೀಟಗಳ ಹತೋಟಿಗೆ ಹಲವು ಬಗೆಯ ಸಸ್ಯಗಳ ಎಲೆ ಅಥವಾ ಬೇರುಗಳಿಂದ ಕ್ರಿಮಿ ನಾಶಕಗಳನ್ನು ತಯಾರಿಸಿ ಸಿಂಪಡಿಸಬಹುದು. ಇವು ಭೂಮಿಗೆ ಬಿದ್ದರೂ ಸಹ, ರಾಸಾಯನಿಕಗಳಂತೆ ಬ್ಯಾಕ್ಟೀರಿಯ ಮತ್ತು ಎರೆಹುಳುಗಳಿಗೆ ಹಾನಿಯುಂಟಾಗುವುದಿಲ್ಲ.

ಜರ್ಮನಿ ಮುಂತಾದ ದೇಶಗಳಲ್ಲಿ ಇಂಥ 25 ಸಸ್ಯಗಳಿಂದ ಕ್ರಿಮಿನಾಶಕ ತಯಾರಿಸಿ ಬಳಸುತ್ತಿದ್ದಾರೆ. ಆ ಪೈಕಿ ಭಾರತದಲ್ಲಿ ಲಭ್ಯವಿರುವ 12 ಸಸ್ಯಗಳ ಪಟ್ಟಿ ಮತ್ತು ಅವುಗಳ ಗುಣಲಕ್ಷಣಗಳನ್ನು ಕೋಷ್ಟಕದಲ್ಲಿ ಕೊಟ್ಟಿದೆ. ಆಯಾ ಗುಣಗಳಿಗನುಗುಣವಾಗಿ ಆಯಾ ರೋಗಕ್ಕೆ ತಕ್ಕ, ತಮಗೆ ಲಭ್ಯವಿರುವ ಔಷಧಿಗಳನ್ನು ರೈತರೇ ತಯಾರಿಸಿ ಬಳಸಬಹುದು.

ತಯಾರಿಕೆ ವಿಧಾನ: 1 ಕಿಲೊ ಬಲಿತ ಸೊಪ್ಪಿಗೆ 10 ಲೀಟರ್ ಕುದಿಯುವ ನೀರನ್ನು ಸುರಿಯಬೇಕು. (ನೀರಿಗೆ ಸೊಪ್ಪು ಹಾಕಿ ಕುದಿಸಬಾರದು.) ಇದನ್ನು 24 ಗಂಟೆ ಹಾಗೇ ಇಟ್ಟರೆ ಸೊಪ್ಪಿನ ರಸ ಪೂರ್ತಿಯಾಗಿ ದ್ರಾವಣಕ್ಕೆ ಬರುತ್ತದೆ. (8 ಗಂಟೆ ಕಾಲ ಬಿಸಿಲಲ್ಲಿಟ್ಟರೆ ಇನ್ನೂ ಉತ್ತಮ) ಇದು ಆಯಾ ಕ್ರಿಮಿ ನಾಶಕದ

(4ನೇ ಪುಟಕ್ಕೆ)

ಗಮನಿಸಿ

ಕಾಂಪೋಸ್ಟ್ ಕೊಳೆಯಬೇಕು. ಆದರೆ ಗೋಮೂತ್ರ ಕಳಿಸುತ್ತದೆ (ಉಪ್ಪಿನ ಗುಣ) ಆದ್ದರಿಂದ ಕಾಂಪೋಸ್ಟ್ ಗುಂಡಿಗೆ ಸಗಣಿಯ ಜೊತೆಗೆ ಗೋಮೂತ್ರ ಸೇರಿಸಬಾರದು (ಆದರೆ ಗೋಬರ್ ಗ್ಯಾಸ್ ಮಿಶ್ರಣಕ್ಕೆ ಸೇರಿಸಬಹುದು)

ಗೋಬರ್ ಗ್ಯಾಸ್ ಘಟಕದ ಸಗಣಿ ಕಾಂಪೋಸ್ಟ್‌ಗೆ ಅತ್ಯುತ್ತಮ.

ಓದುಗರ ಪತ್ರಗಳು

ರೈತರಿಗೆ ಸಾಲ ಮನ್ನಾಕ್ಕಿಂತ ಬಡ್ಡಿ ರಿಯಾಯಿತಿ, ಯೋಗ್ಯಬೆಲೆ ಬೇಕು

ಮಾನ್ಯರೆ,

ಈಗ ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಎಲ್ಲರ ಕಣ್ಣು ಸೆಳೆಯುವ ಒಂದು ವಿಷಯ ಗಮನಿಸಬಹುದು. ರಾಜ್ಯ ವಿಧಾನ ಸಭೆಗಳಲ್ಲಿ ಹಾಗೂ ಲೋಕಸಭೆಯಲ್ಲಿ — ಈ ದೇಶದ ಬೆನ್ನೆಲುಬಾಗಿರುವ (ಹಾಗೆಂದು ಕರೆಯಲ್ಪಡುವ) ರೈತರ 10,000 ರೂ.ಗಳವರೆಗಿನ ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಚರ್ಚೆ ನಡೆಯುತ್ತಿದೆ ಹಾಗೂ ಒಂದೆರಡು ರಾಜ್ಯಗಳಲ್ಲಿ ಮನ್ನಾ ಸಹಾ ಆಗಿದೆ.

ನಾನೂ ಒಬ್ಬ ರೈತನಾಗಿ ಇದನ್ನು ವಿರೋಧಿಸುತ್ತೇನೆ. ಏಕೆಂದರೆ ಸಾಲ ಎಂದರೆ ತೆಗೆದುಕೊಂಡ ಹಣ. ವಾಪಸ್ ಕಟ್ಟಲೆಂದಲೇ ಅಲ್ಲವೆ ತೆಗೆದುಕೊಂಡಿರುವುದು? ಬರೀ ಕರ್ನಾಟಕ ರಾಜ್ಯ ಒಂದರಲ್ಲೇ ಸುಮಾರು 360 ಕೋಟಿ ರೂ ಸಾಲ ಮನ್ನಾ ಮಾಡಬೇಕಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಇಡೀ ದೇಶದಲ್ಲಿ ಇದರ ಮೊತ್ತ ಕಮ್ಮಿ ಎಂದರೂ ಏಳೆಂಟು ಸಾವಿರ ಕೋಟಿ ರೂ.ಗಳಾಗಬಹುದು! ಇದನ್ನು ಸರ್ಕಾರದ ಬೊಕ್ಕಸದಿಂದ ತುಂಬಬೇಕಾಗುತ್ತದೆ. ಅಥವಾ ಮತ್ತೆ ವಿದೇಶೀ ಸಾಲದ ಮೊರೆ ಹೋಗಬೇಕಾಗುತ್ತದೆ. ಇದರೊಂದಿಗೆ, ಕುಶಲ ಕರ್ಮಿಗಳ ಹಾಗೂ ನೇಕಾರರ ಸಾಲವನ್ನೂ ಮನ್ನಾ ಮಾಡಬೇಕೆಂದು ಅವರ ಸಂಘಗಳವರೂ ಕೇಳಿದ್ದಾರೆ. ಹೀಗೆ ಸರಪಳಿಯ ಕೊಂಡಿ ಬೆಸೆಯುತ್ತಾ ಹೋಗುತ್ತದೆ. ಅಲ್ಲಿಗೆ ನಮ್ಮ ಅರ್ಥ ವ್ಯವಸ್ಥೆ ಪೂರಾ ಹದಗೆಡುವುದರಲ್ಲಿ ಸಂಶಯವಿಲ್ಲ.

ಇದರ ಬದಲು ಸರ್ಕಾರ ಬಡ್ಡಿ ರಿಯಾಯ್ತಿ ಮಾಡಲಿ. ಈ ಹಿಂದೆ ಕರ್ನಾಟಕ ರಾಜ್ಯ ಸರ್ಕಾರದವರು ಸಹಕಾರಿ ಸಾಲಗಳಿಗೆ ಶೇ. 7ರ ಬಡ್ಡಿಯಂತೆ ರಿಯಾಯ್ತಿ ದರದಲ್ಲಿ ಸಾಲ ವಸೂಲು ಮಾಡಿದಾಗ ನಬಾರ್ಡ್‌ನವರು ಆಕ್ಷೇಪಿಸಿ ಈಗ ಮತ್ತೆ ಮುಂಚಿನಂತೆ ಶೇ 12½ ಬಡ್ಡಿ ವಸೂಲು ಮಾಡಬೇಕೆಂದಿರುವುದಕ್ಕೆ ದಕ್ಷಿಣ ಕನ್ನಡದ ಇಬ್ಬರು ರೈತರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದು ಎಲ್ಲರಿಗೂ ತಿಳಿದಿದೆ. ಇವೆಲ್ಲದರ ನಡುವೆ ನಮ್ಮ ಆರಿಸಿದ ಪ್ರತಿನಿಧಿಗಳು ಮತ್ತು ರಾಜಕೀಯ ಪಕ್ಷಗಳು ಮತ ಗಳಿಸುವ ತಂತ್ರಕ್ಕಾಗಿ **ನಮ್ಮನ್ನು ಪರೋಕ್ಷ ಋಣದಲ್ಲಿ ಹೀಳುವಂತೆ ಮಾಡುವುದು ಬೇಡ ನಾವು ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ, ಕಡಿಮೆ ದರದಲ್ಲಿ ಗೊಬ್ಬರ ಮತ್ತು ಕೃಷಿ ಯಂತ್ರೋಪಕರಣಗಳ ಪೂರೈಕೆ ಮಾಡಿದರೆ** ರೈತ ಸಮುದಾಯಕ್ಕೆ ತಮ್ಮ ಸೇವೆ ಸಲ್ಲಿಸಿದಂತಾಗುತ್ತದೆ. ಅದು ಬಿಟ್ಟು ಸಾಲ ಮನ್ನಾ ಮಾಡುವ ವಿಚಾರ ಕೈ ಬಿಡಲಿ

ನಿಜವಾದ ಪ್ರಜ್ಞಾವಂತ ರೈತ ಸಾಲ ಮನ್ನಾ ಮಾಡುವುದನ್ನು ವಿರೋಧಿಸುತ್ತಾನೆ. 'ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೆ ಜಾಣ' ಎನ್ನುವವರು ಸಾಲ ಮನ್ನಾ ಮಾಡುವ ವಿಚಾರಕ್ಕೆ ಬೆಂಬಲ ಸೂಚಿಸಬಹುದು.

—ಜೆ. ಕೆ. ವಿಜಯಕುಮಾರ್.
ಕೊಪ್ಪ.

ಧನ್ಯವಾದ

ತಾ|| 10-12-89ರ ನಿಮ್ಮ ಪತ್ರಿಕೆಯಲ್ಲಿ ವೈ. ಗ. ಜಗದೀಶ್ ಬರೆದ '**ಗೊಂಬೆಯಾಟದ ಶಂಕರನಾರಾಯಣ**' ಎಂಬ ನನ್ನ ಪರಿಚಯ ಲೇಖನಕ್ಕಾಗಿ ಅವರಿಗೂ, ಪ್ರಕಟಿಸಿದ ನಿಮಗೂ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ.

—ಆರ್. ಶಂಕರನಾರಾಯಣ,
ಶಿವಪುರ-ಕೊಪ್ಪ.

ಕೋಷ್ಟಕ

ಸಸ್ಯ	ಗುಣಲಕ್ಷಣಗಳು (ರೋಗಾಣುಗಳಿಗೆ)
1. ಆಡುಸೋಗೆ	ವಿಕರ್ಷಕ (ದೂರ ಮಾಡುವುದು) ಮತ್ತು ತಾತ್ಕಾಲಿಕ ವಿಷ.
2. ಕಲ್ನಾರು ಗಿಡ (ಬೂತಾಳೆ-ಭೂತ ಬಾಳೆ)	ಸಂಪರ್ಕ ವಿಷ, ಜಠರ ವಿಷ
3. ಗೇರುಡಂಬಿ	ವಿಕರ್ಷಕ
4. ಸೀತಾಫಲ	ಸಂಪರ್ಕ ವಿಷ, ಜಠರ ವಿಷ
5 ಎಕ್ಕೆ ಗಿಡ	ಜಠರ ವಿಷ, ಬೆಳವಣಿಗೆ ನಿರೋಧಕ
6. ಗ್ಲಿರಿಸೀಡಿಯ	ತಾತ್ಕಾಲಿಕ ವಿಷ
7. ಹೊಂಗೆ	—,,— ಮತ್ತು ವಿಕರ್ಷಕ.
8. ವೀಳ್ಯದೆಲೆ (ಕರಿ ಎಲೆ)	ಜಠರ ವಿಷ
9. ಲಾಂಟಾನಾ	ಸಂಪರ್ಕ ವಿಷ
10. ಬಜೆ	—,,— ಮತ್ತು ವಿಕರ್ಷಕ
11. ಸುವರ್ಣಗೆಡ್ಡೆ	ಬೂಷ್ಟು ರೋಗ ನಿವಾರಕ
12. ಕಹಿ ಬೇವು	ಸಂಪರ್ಕ ವಿಷ, ಜಠರ ವಿಷ, ವಿಕರ್ಷಕ, ಬೇರಿನ ಗಂಟು ರೋಗ ನಿವಾರಕ, ಬೂಷ್ಟು ರೋಗ ನಿವಾರಕ.

(ಬಜೆ ಎಲೆ ಇಲ್ಲದಿದ್ದರೆ 100 ಗ್ರಾಂ ಬೇರು. ಹಾಗೇ ಸುವರ್ಣಗೆಡ್ಡೆ 100 ಗ್ರಾಂ. ಇದರ ದ್ರಾವಣಕ್ಕೆ ನೀರನ್ನು ಬೆರೆಸಬಾರದು.)

ನೈಸರ್ಗಿಕ ಕೃಷಿ ವಿಚಾರ ವಿನಿಮಯ

(3ನೇ ಪುಟದಿಂದ)

ಪ್ರಬಲ ದ್ರಾವಣ (ಕಾನ್ಸೆಂಟ್ರೇಟ್.) ಇದನ್ನು, ತಯಾರಿಸಿದ 48 ಗಂಟೆಯೊಳಗೇ ಬಳಸಬೇಕು. ಅನಂತರ ನಿರುಪಯುಕ್ತ. 1 ಲೀ. ಈ ದ್ರಾವಣಕ್ಕೆ 10 ಲೀ. ನೀರು ಬೆರೆಸಿ ಸಿಂಪಡಿಸಬೇಕು. ಇದು ತಕ್ಷಣ ಮಳೆಯಲ್ಲಿ ತೊಳೆದುಹೋಗದಂತೆ ರಾಳವನ್ನೂ ಬಳಸಬಹುದು.

(ಗಿಡಗಳಿಗೆ ಗೊಬ್ಬರ ಕೊಡುವ ಕಾಲ ಅಮಾವಾಸ್ಯೆಯಿಂದ ಹುಣ್ಣಿಮೆಯ ನಡುವೆ; ಔಷಧಿ ಸಿಂಪರಣೆ ಹುಣ್ಣಿಮೆಯಿಂದ ಅಮಾವಾಸ್ಯೆಯ ನಡುವೆ.)

ಅಗ್ನಿ ಹೋತ್ರ

ಬೆಳಗಿನ ಬಿಸಿಲಿನೊಂದಿಗೆ ತೂರಿ ಬರುವ 'ಅಲ್ಟ್ರಾ ವಯೊಲೆಟ್' ಕಿರಣಗಳು ಗಿಡಗಳಿಗೆ ಹಿತಕರ. ಆದರೆ ಸಂಜೆಯ ಬಿಸಿಲಿನೊಂದಿಗೆ ಬರುವ 'ಇನ್‌ಫ್ರಾರೆಡ್' ಕಿರಣಗಳು ಬಹಳ ಅನರ್ಥಕಾರಿ. ಇಡೀ ಭೂಮಿಯನ್ನು ಆವರಿಸಿರುವ ಓಝೋನ್ ಅನಿಲದ ಪದರ ಈ ಇನ್‌ಫ್ರಾರೆಡ್ ಕಿರಣಗಳನ್ನು ತಡೆಯುತ್ತದೆ. ಆದರೆ ಇದೀಗ ವಿಶ್ವಾದ್ಯಂತ ಕೈಗಾರಿಕಾ ಚಟುವಟಿಕೆಯ ತೀವ್ರತೆಯಿಂದ ಈ ಅನಿಲ ಪದರ ತೆಳುವಾಗಿರುವುದು ಮಾತ್ರವಲ್ಲ, ಧ್ರುವ ಪ್ರದೇಶಗಳಲ್ಲಿ ಹರಿದೂ ಹೋಗಿದೆ.

ಪ್ರಾಚೀನ ಭಾರತದಲ್ಲಿ ಬಳಕೆಯಲ್ಲಿದ್ದ 'ಅಗ್ನಿಹೋತ್ರ' ವಿಧಾನದಿಂದ ಓಝೋನ್ ಅನಿಲ ಪದರ ಸೃಷ್ಟಿಸಬಹುದಲ್ಲದೆ, ಅದರಿಂದಾಗಿ ಮೇಲೆ ಹಾದು ಹೋಗುವ ಮೋಡಗಳನ್ನೂ ಆಕರ್ಷಿಸಿ ಮಳೆ ಪಡೆಯಬಹುದೆಂದು ಕಂಡುಕೊಂಡಿರುವ ಪಾಶ್ಚಾತ್ಯರು ವ್ಯಾಪಕವಾಗಿ ಆ ಕ್ರಮ ಅನುಸರಿಸುತ್ತಿದ್ದಾರೆ.

ಪಾತ್ರೆ : ಪಿರಮಿಡ್ಡನ್ನು ಅರ್ಧಕ್ಕೆ ಕತ್ತರಿಸಿ ತಲೆ ಕೆಳಗಾಗಿ ಇಟ್ಟಂಥ, ತಾಮ್ರ ಅಥವಾ ಮಣ್ಣಿನ ಪಾತ್ರೆ. ಎರಡು ಭುಜಗಳು 11 ಸೆಂ.ಮೀ., ಮೇಲ್ಭಾಗದ ಭುಜ 6 ಸೆಂ ಮೀ. ಮತ್ತು ತಳ ಭುಜ 5 ಸೆಂ.ಮೀ. ಇರಬೇಕು (ಕರಾರುವಾಕ್ಕಾಗಿ). ಸೂರ್ಯೋದಯ ಮತ್ತು ಸೂರ್ಯಾಸ್ತದ ವೇಳೆ, ದನದ ಸಗಣಿಯ ಬೆರಣಿಗೆ ಬೆಂಕಿ ಹಾಕಿ, ಅದಕ್ಕೆ ದನದ ತುಪ್ಪ 'ಊಡಿದ' ಅಕ್ಕಿಯನ್ನು ಹಾಕಿದರೆ ಬರುವ ನೀಲಿ ಜ್ವಾಲೆಯಿಂದ ಓಝೋನ್ ಉಂಟಾಗುತ್ತದೆ. ಇಂಥ ವಾತಾವರಣದಿಂದ ಹಲವಾರು ರೋಗಾಣುಗಳೂ ನಾಶವಾಗುವುದಲ್ಲದೆ, ಪ್ರತಿ ದಿನ ಎರಡು ಹೊತ್ತೂ ಎರಡೆರಡು ನಿಮಿಷ ಈ ಕ್ರಿಯೆ ನಡೆಸಿದರೆ ಏಕಾಗ್ರತೆ, ಮಾನಸಿಕ ಸ್ಥಿಮಿತ ದೊರೆಯುವುದಲ್ಲದೆ ಆರನೇ ಪ್ರಜ್ಞೆ (ಸಿಕ್ಸ್ತ್ ಸೆನ್ಸ್) ಕೂಡ ಜಾಗೃತವಾಗುತ್ತದೆ.

ಬೆಳ್ಳಿ ಹಬ್ಬದ ಕಾರ್ಯಕ್ರಮ

ವಾಣಿಜ್ಯ ಬ್ಯಾಂಕ್‌ಗಳ ಪೈಕಿ ಕೃಷಿ ಸಾಲ ನೀಡಿಕೆಯಲ್ಲಿ ದೇಶದಲ್ಲೇ ಮೊದಲನೆಯದಾದ ಸಿಂಡಿಕೇಟ್ ಬ್ಯಾಂಕ್ ಈ ವರ್ಷ ಆಚರಿಸುತ್ತಿರುವ ಕೃಷಿ ಸಾಲ ನೀಡಿಕೆ ಬೆಳ್ಳಿ ಹಬ್ಬದ ಕೊಡುಗೆಯಾಗಿ, ಬ್ಯಾಂಕಿನ ಕೊಪ್ಪ ಶಾಖೆ ಹಾಗೂ ಕೊಪ್ಪದ ಕೃಷಿ ವಿಚಾರ ವಿನಿಮಯ ಕೇಂದ್ರ ಸಂಯುಕ್ತವಾಗಿ, ಸೊಂಪಾದ ಜಮೀನು ಮತ್ತು ಹಸಿರು ವನಸಿರಿಯ ಮಧ್ಯೆ, ಹಡ್ಲುಕೊಡಿಗೆ ನಂಜುಂಡರಾವ್ ಅವರ ಮನೆಯ ಅಂಗಳದಲ್ಲಿ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ, ನೆರೆಯ ತಾ|| ಗಳಿಂದಲೂ ಸೇರಿದಂತೆ 50 ಕ್ಕೂ ಹೆಚ್ಚು ಜನ ರೈತರು ಅತ್ಯಂತ ಆಸಕ್ತಿಯಿಂದ ಪಾಲ್ಗೊಂಡರು.

ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಶ್ರೀಕಾಂತ್ ಶೆಣೈ ಸ್ವಾಗತಿಸಿ, ಕೃ.ವಿ.ವಿ. ಕೇಂದ್ರದ ಕಾರ್ಯದರ್ಶಿ ಬಿ. ಎಸ್. ಶ್ರೀನಿವಾಸ್ ವಂದಿಸಿದರು.

(ಈ ವಿಚಾರ ಸಂಕಿರಣ ಕುರಿತು ಇನ್ನೂ 2-3 ಟಿಪ್ಪಣಿಗಳು ಮುಂದಿನ ಸಂಚಿಕೆಯಲ್ಲಿ. —ಸಂ.)

ಜಿಲ್ಲಾ ಪರಿಷತ್, ಚಿಕ್ಕಮಗಳೂರು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಚಿಕ್ಕ ಕುಟುಂಬ ಚೊಕ್ಕ ಕುಟುಂಬ

ಮದುವೆಯ ವಯಸ್ಸು — ಹೆಣ್ಣು ಮಕ್ಕಳಿಗೆ 18 ವರ್ಷ, ಗಂಡು ಮಕ್ಕಳಿಗೆ 21 ವರ್ಷ. ಇದು ಶಾಸನ.

ಹೆಣ್ಣು ಮಕ್ಕಳಿಗೆ 20ರಿಂದ 30 ವರ್ಷಗಳ ಒಳಗೆ ಹೆರಿಗೆಯಾಗುವುದು ಸೂಕ್ತ.

ಮಕ್ಕಳ ಹೆರಿಗೆಯ ಅಂತರ ಕೊನೇ ಪಕ್ಷ 3 ವರ್ಷಗಳಿರಲಿ. ಇದಕ್ಕಾಗಿ ಸುರಕ್ಷಿತವಾದ ಕುಟುಂಬ ಯೋಜನಾ ತಾತ್ಕಾಲಿಕ ವಿಧಾನಗಳನ್ನು ಅನುಸರಿಸಿ:

ಸ್ತ್ರೀಯರಿಗೆ :— ಗರ್ಭ ನಿರೋಧಕ ಗುಳಿಗೆ ಮತ್ತು ಕಾಪರ್ 'ಟಿ'

ಪುರುಷರಿಗೆ :— 'ನಿರೋಧ್'

ಎರಡು ಮಕ್ಕಳಾದ ನಂತರ (ಹೆಣ್ಣಾಗಲಿ, ಗಂಡಾಗಲಿ) ಶಾಶ್ವತ ವಿಧಾನ 'ಶಸ್ತ್ರ ಚಿಕಿತ್ಸೆ' ಮಾಡಿಸಿಕೊಳ್ಳಬಹುದು. ಸುರಕ್ಷಿತ ತಾಯ್ತನಕ್ಕಾಗಿ, ಚಿಕ್ಕ ಕುಟುಂಬಕ್ಕಾಗಿ ಇದು ಸೂಕ್ತ.

ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ಆಸ್ಪತ್ರೆಗೆ ಇಂದೇ ಭೇಟಿ ಕೊಡಿ.

(ಸಹಿ) **ಡಾ|| ಎಸ್. ಜಿ. ಹೆಂಡಿ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು

ಚಿಕ್ಕಮಗಳೂರು.

ಭಾರತೀಯ ಜೀವ ವಿಮಾ ನಿಗಮ,

ಮಂಡಲ ಕಾರ್ಯಾಲಯ, ಅಜ್ಜರಕಾಡು, ಉಡುಪಿ-576 101.

ಪ್ರಕಟಣೆ

ಕೊಪ್ಪ ಪೇಟೆಯ ಸೈಟ್ ನಂಬ್ರ 981, ತ್ಯಾಗರಾಜ ರಸ್ತೆಯಲ್ಲಿರುವ ನಮ್ಮ ಶಾಖೆಯು ಈಗಾಗಲೇ ಕಾರ್ಯವೆಸಗುತ್ತಿರುವುದು ಸರ್ವವಿದಿತ.

ತಾ. 1-1-1990 ರಿಂದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ ಮತ್ತು ನರಸಿಂಹರಾಜಪುರ ತಾಲ್ಲೂಕುಗಳ ನಮ್ಮ ಎಲ್ಲ ಪಾಲಿಸಿದಾರರ ಮತ್ತು ವಿಮಾಕಾಂಕ್ಷಿ ಗ್ರಾಹಕರ ಅನುಕೂಲಕ್ಕಾಗಿ ಅವರ ಪಾಲಿಸಿಗಳ ಸಂಬಂಧದಲ್ಲಿ ಸಕಲ ವಿಧದ ಸೇವೆಯನ್ನು ಕೊಪ್ಪ ಶಾಖೆಯಿಂದಲೇ ನೀಡಲಾಗುವುದೆಂದು ತಿಳಿಸಲು ಸಂತೋಷಿಸುತ್ತೇವೆ ಮತ್ತು ಇನ್ನು ಮುಂದೆ ಕೊಪ್ಪ, ಶೃಂಗೇರಿ ಮತ್ತು ನರಸಿಂಹರಾಜಪುರ ತಾಲ್ಲೂಕುಗಳ ಎಲ್ಲ ಪಾಲಿಸಿದಾರರು ತಮ್ಮ ಪಾಲಿಸಿಗಳ ಬಗ್ಗೆ ಪತ್ರ ವ್ಯವಹಾರವನ್ನು ಕೊಪ್ಪ ಶಾಖೆಯೊಡನೆ ನೇರವಾಗಿ ಮಾಡಬೇಕೆಂದೂ ಪಾಲಿಸಿಗಳ ಸೇವೆಗಾಗಿ ಆ ಶಾಖೆಯನ್ನೇ ಸಂಪರ್ಕಿಸಬೇಕೆಂದೂ ವಿನಂತಿಸುತ್ತೇವೆ.

ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಿಗೆ ಸಂಬಂಧಿಸಿದ ನಿವಾಸಿಗಳ ಪಾಲಿಸಿಗಳ ದಾಖಲೆಗಳನ್ನು ಚಿಕ್ಕಮಗಳೂರು ಶಾಖೆಯಿಂದ ಕೊಪ್ಪ ಶಾಖೆಗೆ ವರ್ಗಾಯಿಸುವ ಕಾರ್ಯವು ಈಗ ಪ್ರಗತಿ ಪಥದಲ್ಲಿದೆ.

ಪಾಲಿಸಿದಾರರಿಗೆ ಹಿಂದಿಗಿಂತ ಹೆಚ್ಚು ಉತ್ತಮವಾದ ಸೇವೆಯನ್ನೊದಗಿಸುವ ನಮ್ಮ ಈ ಪ್ರಯತ್ನಕ್ಕೆ ಎಲ್ಲರೂ ಸಂಪೂರ್ಣ ಸಹಕಾರವಿತ್ತು ಅದನ್ನು ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ.

ಉಡುಪಿ,

ತಾ. 30-12-89

ಸಿ. ಮಾರ್ಟಿಸ್,

ಹಿರಿಯ ಮಂಡಲ ಪ್ರಬಂಧಕರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.